<u>ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಸೇಡಂ</u>

<u>ಸಿ.ಸಿ. ನಂಃ 417/2024</u>

ಫಿರ್ಯಾದಿಃ ಕರ್ನಾಟಕ ಸರಕಾರ ಪರ ಮುಧೊಳ ಪೋಲೀಸ್ ಠಾಣೆ

//ವಿರುದ್ಧ//

ಆರೋಪಿ:

1. ಗೋಪಾಲ ತಂದೆ ಶ್ಯಾಮಪ್ಪಾ ಕಲಾಲ್,
ವಃ 46 ವರ್ಷ, ಉಃ ಸೇಂದಿ ಮಾರಾಟ,
ಸಾಃ ಮೇದಕ.

2. ಗೋವಿಂದ ತಂದೆ ಕಾಶಪ್ಪಾ ಕಲಾಲ್,
ವಃ 42 ವರ್ಷ, ಉಃ ಸೇಂದಿ ಮಾರಾಟ,
ಸಾಃ ಕಡಚರ್ಲಾ.

3. ಬಲಾರಾಜ ತಂದೆ ವೆಂಕಟಯ್ಯ ಕಲಾಲ್, **(dead)**
ವಃ 46 ವರ್ಷ, ಉಃ ಸೇಂದಿ ಮಾರಾಟ,
ಸಾಃ ಕಡಚರ್ಲಾ,

4. ನಾರಾಯಣ ತಂದೆ ಕಾಶಪ್ಪಾ ಕಲಾಲ್,
ವಃ 40 ವರ್ಷ, ಉಃ ಸೇಂದಿ ಮಾರಾಟ,
ಸಾಃ ಕಡಚರ್ಲಾ.

---

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರ ಅನ್ವಯ ಆರೋಪಿಯ ಹೇಳಿಕೆ</u>

ಪ್ರಶ್ನೆ 1ಃ ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳನ್ನು ಮನಃಪೂರ್ವಕವಾಗಿ ಕೇಳಿದ್ದಿರಾ.

ಉಃ ಆ-1 ಆ-2

ಆ-4

ಪ್ರಶ್ನೆ 2 ಪ್ರಾಸಾಃ **1** ಶಂಕರ ಇವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೆನೆಂದರೆ, ತಾನು ದಿನಾಂಕಃ 09-04-2017 ರಂದು ಠಾಣೆ ಎಸ್.ಹೆಚ್.ಓ ಆಗಿದ್ದಾಗ, ಚಾಸಾ-1 ರವರು ಠಾಣೆಗೆ ಬಂದು ಅಮಾನತ್ತು ಪಂಚನಾಮೆ ಮತ್ತು ವಶಪಡಿಸಿಕೊಂಡ ವಸ್ತುಗಳು ಮತ್ತು ಆರೋಪಿತರನ್ನು ಹಾಜರು ಪಡಿಸಿದ ಮೇರೆಗೆ ತಾನು ಆರೋಪಿಗಳ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತೇನೆ. ಸಾಕ್ಷಿಗೆ ಜಪ್ತಿ

ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿ ಎಫ್.ಐ.ಆರ್. ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ನಿಪಿ-2 ವರದಿ ಆಧರಿಸಿ ನಿಪಿ-3 ರಂತೆ ಎಫ್.ಐ.ಆರ್ ಮಾಡಿದ್ದೇನೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-10 ರವರಿಗೆ ಹಸ್ತಾಂತರ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ ಆ-1 ಆ-2

ಆ-4

ಪ್ರಶ್ನೆ 3 ಪ್ರಾಸಾಃ **2** ಶ್ರೀಕಾಂತಯ್ಯ ಇವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ, 2015 ರಿಂದ 2020 ರವೆರೆಗೆ ಮುದೋಳ ಪೊ.ಠಾಣೆಯಲ್ಲಿ ಪಿ ಸಿ ಆಗಿ ಕಾರ್ಯನಿರ್ವಹಿಸಿದ್ದೇನೆ. ದಿನಾಂಕ 09.04.2017 ರಂದು ತಾನು, ಚಾಸಾ-1, ಚಾಸಾ-4, ಚಾಸಾ-5 ಮತ್ತು ಚಾಸಾ-7 ರವರು ಕಡಚರಲರ್ಾ ಬಸ್ ಸ್ಟಾಂಡ ಹಿಂಬದಿ ಮಾಹಿತಿ ಬಂದ ಮೇರೆಗೆ ಖಾಸಗಿ ವಾಹನದಲ್ಲಿ ಅಲ್ಲಿಗೆ ಹೋದೇವು. ಅಲ್ಲಿ ಹೋಗಿ ನೋಡಲಾಗಿ ನಂತರ ದಾಳಿ ಮಾಡಿದಾಗ ಕೇಲವರು ಒಡಿ ಹೋದರು ಇಬ್ಬರು ಸಿಕ್ಕರು, ಅವರ ಹೆಸರು ಕೇಳಲಾಗಿ ಗೋಪಾಲ್ ತಂದೆ ಶಾಮಪ್ಪ ಮುತ್ತ ಗೋವಿಂದ ತಂದೆ ಕಾಶಪ್ಪ ಎಂದು ಹೇಳಿದರು. ಗೋಪಾಲ್ ನ ಬಳಿ 120 ರೂ. ತಲಾ 1 ಲೀ ಅಳತೆಯ 20 ಶೇಂದಿ ಪ್ಯಾಕೇಟ್ಗಳು ಸಿಕ್ಕವು. ಗೋವಿಂದ ನ ಬಳಿ 80/- ರೂ. ಮತ್ತು ತಲಾ 1 ಲೀ ಅಳತೆಯ 20 ಶೇಂದಿ ಪ್ಯಾಕೇಟ ಗಳುಸಿಕ್ಕವು. ನಾವು ಹೋಗುವಾಗ ಚಾಸಾ-2 ಮತ್ತು 3 ರವರನ್ನು ಪಂಚರಾಗಿ ಕರೆದುಕೊಂಡು ಹೋಗಿದ್ದೇವು. ಅವರ ಸಮಕ್ಷಮ ಚಾಸಾ-1 ರವರು ಶೇಂದಿ ಪ್ಯಾಕೇಟ್ ಗಳನ್ನು ಪಂಚನಾಮೆ ಮೂಲಕ ಜಪ್ತಿ ಮಾಡಿದರು. ಆ ದಿನ ಠಾಣೆಯನು 11.45 ಕ್ಕೆ ಬಿಟ್ಟು, 12.30 ಕ್ಕೆ ಸ್ಥಳಕ್ಕೆ ಹೋಗಿದ್ದೇವು. ಚಾಸಾ-1 ನಿಮ್ಮ ಜೊತೆ ಬೇರೆ ಯಾರು ಶೇಂದಿ ಮಾರಾಟ ಮಾಡುತ್ತಾರೆ ಎಂದು ಆರೋಪಿಗಳನ್ನು ಕೇಳಿದಾಗ ಆರೋಪಿಗಳು ಬಾಲರಾಜು ಮತ್ತು ನಾರಾಯಣರವರ ಹೆಸರು ಹೇಳಿದರು. ಶೇಂದಿಯನ್ನು ತೆಲಂಗಾಣದ ರಾವಣಪಲ್ಲಿ, ಮೈಲವಾರ್ ಹಳ್ಳಿಗಳಿಂದ 5 ರೂಪಾಯಿಗೆ ಒಂದು ಪ್ಯಾಕೇಟ್ ತಂದು ಇಲ್ಲಿ 10 ರೂ. ಪ್ಯಾಕೇಟ್ ಮಾರಾಟ ಮಾಡುತ್ತೇವೆ ಎಂದು ಹೇಳಿದರು. 2 ಪ್ಯಾಕೇಟಗಳನ್ನು FSL ಪರೀಕ್ಷೆ ಗೆ ಕಳುಹಿಸುವ ಸಲುವಾಗಿ ಖಾಲಿ ನೀರಿನ ಬಾಟಲಿಗಳಿಗೆ ಹಾಕಿಕೊಂಡು ಬಾಟಲಿಗಳನ್ನು ಶೀಲ್ ಮಾಡಿದೇವು. ಪಂಚನಾಮೆಯನ್ನು 12.30 ರಿಂದ 01.30 ರವರೆಗೆ ಮಾಡಿದ್ದಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ ಆ-1 ಆ-2

ಆ-4

ಪ್ರಶ್ನೆ 4 ಪ್ರಾಸಾಃ **4** ಲಕ್ಷ್ಮೀಕಾಂತ ಇವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ, ತಾನು 2015 ರಿಂದ 2019 ರವರೆಗೆ ಮುದೋಳ ಪೊ.ಠಾಣೆಯಲ್ಲಿ ASI ಆಗಿ ಕಾರ್ಯನಿರ್ವಹಿಸಿದ್ದೇನೆ. ದಿನಾಂಕ 09.04.2017 ರಂದು ಚಾಸಾ-9 ರವರಿಂದ ಕಡತ ಪಡೆದುಕೊಂಡು ತನಿಖೆ ಮುಂದುವರೆಸಿ ಅದೇ ದಿನ ಚಾಸಾ-4 ರಿಂದ 7 ರವರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. ದಿನಾಂಕ 20.06.2017 ರಂದು ಚಸಾ-8 ರವರಿಂದ FSL ವರದಿ ಪಡೆದುಕೊಂಡಿರುತ್ತೇನೆ. ಸದರಿ ವರದಿಯನ್ನು ನಿಪಿ-4 ಎಂದು ಗುರುತಿಸಲಾಯಿತು. ದಿನಾಂಕ 25.06.2017 ರಂದು ತನಿಖೆ ಪೂರೈಸಿ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರ ಸಲ್ಲಿಸಿದ್ದೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ ಆ-1 ಆ-2

ಆ-4

ಪ್ರಶ್ನೆ 5 ನೀವು ಇನ್ನೇನಾದರೂ ಹೆಚ್ಚಿಗೆ ಹೇಳುವುದು ಇದೆಯೇ?

ಉಃ ಆ-1 ಆ-2

ಆ-4

ಪ್ರಶ್ನೆ 6 ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿಗಳನ್ನು ಮಾಡಿಸುತ್ತೀರಾ?

ಉಃ ಆ-1 ಆ-2

ಆ-4

(ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿ ಆರೋಪಿತರ ಹೇಳಿಕೆಗಳನ್ನು ದಾಖಲಿಸಿಕೊಂಡು ಅವರಿಗೆ ಗೊತ್ತಿದ್ದ ಭಾಷೆಯಲ್ಲಿ ಅಭಿಯೋಜಕರ ಪರ ವಿಚಾರಣೆಯಾದ ಸಾಕ್ಷಿಗಳ ಹೇಳಿಕೆಗಳನ್ನು ಓದಿ ಹೇಳಿ ಅವರ ಹೇಳಿಕೆಗಳನ್ನು ಪಡೆಯಲಾಯಿತು.)

ದಿನಾಂಕಃ 25-03-2026

ಹಿ.ಶ್ರೇ. ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.
ದಂಡಾಧಿಕಾರಿಗಳು ಸೇಡಂ.

Accused No.1, 2 & 4 are present before the court. 313 Cr.P.C. Statements of accused persons are recorded and read over and explained to the accused persons in the language known to them.

Accused No.1, 2 & 4 have denied the incriminating statement against them and submitted that he has no defense evidence.

For arguments call on

**Sr.C.J. & JMFC, Sedam**